ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಬುಧವಾರ, ದಿನಾಂಕ ೧೫ನೇ ಏಪ್ರಿಲ್ ೧೯೮೭ ಚೈತ್ರ ೧೧, ಶಕ ೧೯೦೯

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದ್ದರು].

1. ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಪಿ. ಬಿ. ಬೊಮ್ಮಣ್ಣನವರು ದಿನಾಂಕ ೩೦ನೇ ಮಾರ್ಚ್ ೧೯೮೭ ರಂದು ನಿಧನರಾದರು ಎಂದು ಈ ಸಭೆಗೆ ತಿಳಿಸಲು ವಿಷಾದಿಸುತ್ತೇನೆ. ಶ್ರೀಯುತರು ೧೯೪೫ ರಿಂದ ೧೯೪೯ರವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ೧೯೬೨ ರಿಂದ ೬೭ರ ವರೆಗೆ ವಿಧಾನಸಭಾ ಸದಸ್ಯರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ. ನಿಧನ ಹೊಂದಿದ ಮಾನ್ಯ ಸದಸ್ಯರ ಆಂಗವಾಗಿ ಮಾನ್ಯ ಸದಸರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಒಂದು ನಿಮಿಷಗಳ ಕಾಲ ಅಗಲಿದ ಸದಸ್ಯರ ಗೌರವಾರ್ಥ ಮೌನವನ್ನು ಆಚರಿಸಿತು.)

ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಪ್ರಶ್ನೆ ಸಂಖ್ಯೆ ೬೫೧ (೨೧೧೨) ಶ್ರೀ ಕೆ. ಕುಶಾಲ ಈ ಪ್ರಶ್ನೆಯನ್ನು ಪಂಜಂದಾಡಲಾಗಿದೆ.

ಪ್ರಶ್ನೆ ಸಂಖ್ಯೆ ೬೫೨ (೧೯೭೦) ಈ ಪ್ರಶ್ನೆಯನ್ನು ಮೂರು ಜನರು ಹಾಕಿದ್ದಾರೆ, ಯಾರಾದರೂ ಒಬ್ಬರು ಕೇಳಿ.

ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಕಾಮಗಾರಿಗಳನ್ನು ಲೋಕಾಯುಕ್ತದಿಂದ ತನಿಖೆ ನಡೆಸುವ ಬಗ್ಗೆ.

೧೯೭೦. ಶ್ರೀ ಮಲ್ಲಿಕಾರ್ಜುನ ಖರ್ಗೆ, ಮಲ್ಲಾರಿಗೌಡ ಎಸ್. ಪಾಟೀಲ್ ಮತ್ತು ಎನ್. ಎಸ್. ಬೋಡ್ (ಗುರುಮಿಟ್‌ಕಲ್).—ಮಾನ್ಯ ಗೃಹ ವಿಶ್ವಾಸಾಭಿವೃದ್ಧಿ ವಸತಿ ಹಾಗೂ ವಕ್ಫ್ಸ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ಗೃಹ ಮಂಡಳಿಯ ಕಾಮಗಾರಿ ಕೆಲಸಗಳ ಬಗ್ಗೆ ಲೋಕಾಯುಕ್ತ ತನಿಖೆ ನಡೆಸಿದ ಪ್ರಕರಣಗಳಿವೆಯೇ?

ಆ) ಹಾಗಿದ್ದಲ್ಲಿ ಎಷ್ಟು ಹಾಗೂ ಯಾವ ಯಾವ ಸ್ಥಳಗಳಲ್ಲಿ?

ಇ) ಲೋಕಾಯುಕ್ತದ ವರದಿ ಏನಾದರೂ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಪಕ್ಷ ಮತ್ತು ವಸತಿ ಸಚಿವರು).—

ಆ) ಹೌದು.

ಆ) ಒಟ್ಟು : ೨ ೧) ಬಳ್ಳಾರಿ
೨) ಬೆಳಗಾಂ

ಇ) ಬಳ್ಳಾರಿ ವಿಚಾರವಾಗಿ ಬಂದಿದೆ.

ಈ) ೧. ಬಳ್ಳಾರಿ ವಿಚಾರವಾಗಿ ಲೋಕಾಯುಕ್ತದಿಂದ ವರದಿ ಬಂದಿದ್ದು ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳಲು ಆದೇಶ ನೀಡಿದೆ. ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

೨. ಬೆಳಗಾಂ ಕಾಮಗಾರಿಯ ಬಗ್ಗೆ ಲೋಕಾಯುಕ್ತದಿಂದ ತನಿಖೆ ನಡೆಯುತ್ತಿದೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಬಳ್ಳಾರಿಯಲ್ಲಿ ಆಗತಕ್ಕಂತಹ ಘಟನೆಯ ಬಗ್ಗೆ ಲೋಕಾಯುಕ್ತರಿಂದ ವರದಿ ಬಂದಿದೆ ಎಂದು ಹೇಳಿದ್ದೀರಿ, ಅವರು ಯಾರ್ಯಾರು ಏನೇನು ತಪ್ಪುಗಳನ್ನು ಮಾಡಿದ್ದಾರೋ ಎಂಬುದನ್ನು ದಯಮಾಡಿ ತಿಳಿಸಿ. ಆ ತಪ್ಪಿತಸ್ಥರು ಸರ್ಕಾರಿ ಅಧಿಕಾರಿಗಳೋ ಅಥವಾ ಸಾರ್ವಜನಿಕರೋ ಎಂಬುದನ್ನು ಸಹ ತಿಳಿಸಬೇಕು. ತಪ್ಪಿತಸ್ಥರು ಯಾವ ತರಹದ ತಪ್ಪು ಮಾಡಿದ್ದಾರೆ, ಅದರ ಮೊತ್ತವೆಷ್ಟು?

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ ವಿಚಾರಣೆ ಮಾಡಿರತಕ್ಕಂಥಾದ್ದರಲ್ಲಿ ಈ ಕೆಳಗಿನ ಅಂಶಗಳನ್ನು ಹೇಳಿದ್ದಾರೆ. ಹಂಡ್ಕೋ ಯೋಜನೆಯಿಂದ ಬಳ್ಳಾರಿಯಲ್ಲಿ ಒಂದನೇ ಹಂತದಲ್ಲಿ ಅಲ್ಪ ಆದಾಯವಿರತಕ್ಕಂಥವರಿಗೆ ೨೦೦ ಮನೆಗಳನ್ನು ನಿರ್ಮಿಸಲಾಗುತ್ತಿದೆ; ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ೧೬೯ ಮನೆಗಳನ್ನು ನಿರ್ಮಿಸಲಾಗುತ್ತಿದೆ, ಮಧ್ಯಮ ಆದಾಯವಿರತಕ್ಕಂಥವರಿಗೆ ೬೯ ಮನೆಗಳನ್ನು ನಿರ್ಮಿಸಲಾಗುತ್ತಿದೆ, ಮಧ್ಯಮ ವರ್ಗದವರಿಗೆ ಎರಡನೇ ಹಂತದಲ್ಲಿ ೬೩ ಮನೆಗಳನ್ನು ನಿರ್ಮಿಸಲಾಗುತ್ತಿದೆ, ಈ ಎಲ್ಲಾ ಮನೆಗಳ ಒಟ್ಟು ಅಂದಾಜು ೧.೯ ಕೋಟಿ ರೂಪಾಯಿಗಳು. ಈ ಯೋಜನೆಗೆ ಹುಡ್ಕೋದಿಂದ ಸುಮಾರು ೭೯ ಲಕ್ಷ ೬ ಸಾವಿರ ರೂಪಾಯಿಗಳು ಮಂಜೂರಾಗಿದೆ. ಅಲ್ಲಿ ಈಗ ಕೆಲಸ ಪ್ರಗತಿಯಲ್ಲಿದೆ. ಅಲ್ಲಿನ ಶಾಸಕರಾದಂಥ ಶ್ರೀಮಾನ್ ಶಿವರಾಮರೆಡ್ಡಿಯವರು ದಿನಾಂಕ ೧೧-೬-೮೪ರಲ್ಲಿ ತಮಗೆ ಬಂದ ಒಂದು ಅನಾಮಧೇಯ ಪತ್ರದ ಆಧಾರದ ಮೇಲೆ ಒಂದು ಪತ್ರವನ್ನು ಸರ್ಕಾರಕ್ಕೆ ಬರೆದಿದ್ದರು. ಆ ಪತ್ರದಲ್ಲಿ ಅಲ್ಲಿ ನಿರ್ಮಾಣವಾಗುತ್ತಿರುವ ಮನೆಗಳ ಕೆಲಸ ಕಳಪೆಯಾಗಿವೆ ಎನ್ನುವ ಆತಂಕವನ್ನು ಸಹ ಅವರು ವ್ಯಕ್ತಪಡಿಸಿದ್ದರು. ಆ ಆಧಾರದ ಮೇಲೆ ಸರ್ಕಾರ ಲೋಕಾಯುಕ್ತರಿಗೆ ಇದನ್ನು ಒಪ್ಪಿಸಿದ್ದು ತನಿಖೆ ಮಾಡಿಸಿತ್ತು. ತನಿಖೆಯ ವರದಿ ೧೯-೯-೧೯೮೬ರಲ್ಲಿ ಸರ್ಕಾರಕ್ಕೆ ಬಂದಿದೆ. ವರದಿ ಬಹಳ ದೊಡ್ಡದಾಗಿದೆ ಆದ್ದರಿಂದ ಇಲ್ಲಿ ಓದುವುದು ಬೇಡವೆಂದು ಅನಿಸುತ್ತದೆ. ವರದಿಯಲ್ಲಿ ಯಾರನ್ನು ಜವಾಬ್ದಾರರನ್ನಾಗಿ ಮಾಡಿದ್ದಾರೋ ಅವರ ಮೇಲೆ ಕ್ರಮ ಕೈಗೊಳ್ಳುವಂತೆ ಹೌಸಿಂಗ್ ಬೋರ್ಡಿನವರು ಸರ್ಕಾರಕ್ಕೆ ಕಳುಹಿಸಿದ್ದಾರೆ. ಆ ಪ್ರಕಾರ ಜವಾಬ್ದಾರಿಯನ್ನು ಗುರುತು ಮಾಡಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂತಹ ಲೋ-ಸ್ಟ್ಯಾಂಡರ್ಡ್ ಕೆಲಸ ಅನೇಕ ಕಡೆಗಳಲ್ಲಿ ಆಗಿದೆ. ಗುತ್ತಿಗೆಗೆ ಕೊಟ್ಟರು ಕಾಲಕ್ಕೆ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಗುತ್ತಿಗೆಯವರನ್ನು ಹತೋಟಿಯಲ್ಲಿಟ್ಟುಕೊಳ್ಳತಕ್ಕಂಥ ಎಕ್ಸಿಕ್ಯೂಟೀವ್ ಇಂಜಿನೀಯರ್ ಆಗಲಿ ಅಥವಾ ಅಸಿಸ್ಟೆಂಟ್ ಇಂಜಿನೀಯರ್ ಆಗಲಿ ಸರಿಯಾಗಿ ನೋಡಿಕೊಳ್ಳುವುದಿಲ್ಲ. ಆದ್ದರಿಂದ ಎಲ್ಲೆಲ್ಲಿ ಇಂತಹ ಕಳಪೆ ಕೆಲಸಗಳನ್ನು ಮಾಡಿದ್ದಾರೋ ಅಲ್ಲೆಲ್ಲಾ ತಾವು ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ? ಇಲ್ಲಿ ಏನಾಗಿದೆ

ಒಂದು ಮನೆಗೆ ೫೫ ಸಾವಿರ ರೂಪಾಯಿಗಳಾಗಬಹುದೆಂದು ತಾವು ಅಂದಾಜು ಮಾಡಿದರೆ ಆ ಮನೆ ಪೂರ್ತಿಯಾಗುವಷ್ಟರಲ್ಲಿ ೭೫ ಸಾವಿರ ರೂಪಾಯಿಗಳಾಗಿಂತ್ತದೆ. ಪ್ರತಿವರ್ಷ ಕಾಸ್ಟ್ ಸಹ ಜಾಸ್ತಿಯಾಗುತ್ತಾ ಹೋಗುತ್ತದೆ. ಲ್ಯಾಂಡ್ ಅಕ್ವಿಜೇಶನ್‌ಗೆ ಕೂಡ ಜಾಸ್ತಿ ಹಣ ಕೊಡಬೇಕಾಗುತ್ತದೆ. ತಾವೇನು ಬಡವರಿಗೆ ಸಹಾಯ ಮಾಡಬೇಕೆಂದು ಹೊರಟಿದ್ದೀರೊ ಅದು ಕಾಲಕ್ಕೆ ಸರಿಯಾಗಿ ಆಗುವುದಿಲ್ಲ. ಬಡವರಿಗೆ ಅನುಕೂಲವಾಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಎಲ್ಲೆಲ್ಲಿ ಈ ರೀತಿಯ ಕಳಪೆ ಕೆಲಸಗಳು ಆಗಿವೆಯೋ ಅಲ್ಲಿ ಇನ್‌ವೆಸ್ಟಿಗೇಷನ್ ಮಾಡಿಸುತ್ತೀರಾ?

ಶ್ರೀ ಅಬ್ದುಲ್ ನಜೀರ್‌ಸಾಬ್.—ಮಾನ್ಯ ಅಧ್ಯಕ್ಷರೇ ಕಟ್ಟಿರತಕ್ಕಂಥ ಎಲ್ಲಾ ಮನೆಗಳು ಸಹ ಕಳಪೆ ಎಂದು ನಾನಂ ಹೇಳುವುದಿಲ್ಲ. ಎಲ್ಲೆಲ್ಲಿ ಆ ರೀತಿಯ ಕಳಪೆ ಕೆಲಸಗಳು ಆಗಿವೆಯೋ ಅದನ್ನು ನನ್ನ ಗಮನಕ್ಕೆ ಮಾನ್ಯ ಸದಸ್ಯರು ತಂದರೆ ಅಲ್ಲಿ ನಾನು ಇನ್‌ವೆಸ್ಟಿಗೇಷನ್ ಮಾಡಿಸುತ್ತೇನೆ. ಇನ್ನು ದಿನೇ ದಿನೇ ಮನೆಗಳ ಬೆಲೆ ಜಾಸ್ತಿಯಾಗುತ್ತದೆಂದಂ ಹೇಳಿದರಂ ಅದನ್ನು ನಾನು ಒಪ್ಪುತ್ತೇನೆ. ಈಗ ಕಾಲಕ್ಕೆ ಸರಿಯಾಗಿ ಮನೆಗಳನ್ನು ಕಟ್ಟಬೇಕೆಂದು ಹೇಳಿದ್ದೇವೆ. ೯ ತಿಂಗಳಿಗೆ ಮಂಗಿಸಬೇಕೆಂದು ಗುತ್ತಿಗೆದಾರರಿಗೆ ತಿಳಿಸಿದ್ದರೆ ೯ ತಿಂಗಳಿಗೆ ಮಂಗಿಸಬೇಕಂ. ಈಗ ಪ್ರೈವೇಟ್‌ನವರಿಗೆ ಕೊಡುವುದನ್ನು ತಪ್ಪಿಸಿ ಲ್ಯಾಂಡ್ ಅರ್ಮಿಯವರ ಮಂಖಾಂತರ ಮಾಡಿಸಬೇಕೆಂದು ಹೇಳಿ ಅವರ ಮುಖಾಂತರ ಕೆಲಸ ಮಾಡಿಸುತ್ತಿದ್ದೇವೆ. ಮಂತ್ರಂ ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿ ಕಾರ್ಪೊರೇಷನ್‌ನವರು ಮಂದೆ ಬಂದರೆ ಅವರಿಗೂ ಸಹ ಕೆಲಸ ಕೊಡುತ್ತೇವೆ. ಒಟ್ಟಿನಲ್ಲಿ ಸರ್ಕಾರದ ಉದ್ದೇಶವೆಂದರೆ ಪ್ರೈವೇಟ್‌ನವರಿಗೆ ಕೊಡುವುದನ್ನು ತಪ್ಪಿಸಬೇಕಂ. ಎಸ್ಕಲೇಶನ್ ಆಗುವುದನ್ನು ತಪ್ಪಿಸಬೇಕಂ. ಒಂದೇ ಏಜೆನ್ಸಿ ಮುಖಾಂತರ ವಿದ್ಯುಚ್ಛಕ್ತಿ ಕಲ್ಪಿಸುವುದು, ನೀರಿನ ಸೌಲಭ್ಯ ಕೊಡುವುದನ್ನೂ ಮಾಡಬೇಕೆಂದಂ ಇದ್ದೇವೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಹೌಸಿಂಗ್ ಬೋರ್ಡ್‌ನಲ್ಲಿ ರೂಲೂ ಇಲ್ಲ ರೆಗ್ಯುಲೇಷನ್ನೂ ಇಲ್ಲ. ಅವರದೇ ಒಂದು ವ್ಯವಸ್ಥಿತವಾದ ರೂಲ್ಸ್ ಇಲ್ಲವಾಗಿದೆ. ಈ ಬೋರ್ಡ್‌ನಲಿರತಕ್ಕಂಥ ಅನೇಕ ಅಧಿಕಾರಿಗಳಂ ಬೇರೆ ಇಲಾಖೆಗಳಿಂದ ಡೆಪ್ಯೂಟೇಷನ್ ಮೇಲೆ ಬಂದವರೇ ಆಗಿದ್ದಾರೆ ಈ ಬೋರ್ಡ್‌ನಲ್ಲಿರತಕ್ಕ ಚೇರ್ಮನ್‌ರವರಿಗಾಗಲೀ ಅಥವಾ ಕಮೀಷನರವರಿಗಾಗಲೀ ಇವರುಗಳ ಮೇಲೆ ಹತೋಟಿಯನ್ನು ಇಟ್ಟುಕೊಳ್ಳುವ ಅಧಿಕಾರ ಇರುವುದಿಲ್ಲ. ಡೆಪ್ಯುಟೇಷನ್ ಮೇಲೆ ಅಧಿಕಾರಿಗಳನ್ನು ಈ ಬೋರ್ಡಿಗೆ ಹಾಕಬಾರದು. ಇದರಿಂದಾಗಿ ಅಲ್ಲಿ ಒಳ್ಳೆಯ ಕೆಲಸ ಮಾಡಲು ಆಗುತ್ತಿಲ್ಲ. ತನ್ನದೇ ಆದ ಸಿಬ್ಬಂದಿಯನ್ನು ಹೊಂದಿದ್ದರೆ ಅವರು ಸಮರ್ಪಕವಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಹೌಸಿಂಗ್ ಬೋರ್ಡ್‌ನವರು ತನ್ನದೇ ಆದ ಸಿಬ್ಬಂದಿಯನ್ನು ಇಟ್ಟುಕೊಳ್ಳುವುದಕ್ಕೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದಾರೆ. ಈ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗುತ್ತದೆ

ಅಧ್ಯಕ್ಷರು.—ಶ್ರೀ ಚಂದ್ರಶೇಖರ ಮಾವಿನಿಯವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.

ರೋಣ ತಾಲ್ಲೂಕಿನಲ್ಲಿ ಕುಡಿಯುವ ನೀರಂ ಸರಬರಾಜು ಯೋಜನೆ

೧೯೧೫ ಶ್ರೀ ಬಿ. ಆರ್. ಯಾವಗಲ್ (ನರಗುಂದ).— ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರೋಣ ತಾಲ್ಲೂಕಿನ ಹೊಳೆ ಆಲೂರ ಗ್ರಾಮ ಹಾಗೂ ಬೇರೆ ಹಳ್ಳಿಗಳಿಗೆ ಕುಡಿಯುವ ನೀರಿನ ಯೋಜನೆ ಕಾರ್ಯಗತವಾಗಿ ಎಷ್ಟು ವರ್ಷಗಳಾಗಿವೆ ?

(ಆ) ಎಷ್ಟು ಹಳ್ಳಿಗಳಿಗೆ ನೀರನ್ನು ಒದಗಿಸಲಾಗಿದೆ ?

(ಇ) ಯೋಜನೆಯನ್ನು ಪೂರ್ತಿ ಮುಗಿಸದೆ ಅರ್ಧಕ್ಕೆ ಕೈ ಬಿಟ್ಟಿರಲು ಕಾರಣಗಳೇನು ? ಹಾಗೂ ಇದಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ.